

ಕಂಪನಿಯೊಂದು ತನ್ನ ಪ್ರಾಡಕ್ಟಗಳನ್ನು ಜಾಹೀರು ಮಾಡಿಕೊಳ್ಳಲು ಆಯ್ದ ಕೆಲ ಜೋಡಿಗಳನ್ನು ಸಿಲೆಕ್ಟ್ ಮಾಡಿ ಅವರಿಗೆ ಫ್ರೀಯಾಗಿ ಟೂರ್ ಮಾಡಿಸುತ್ತಂತೆ. ಕಾಶಿ, ಬದರೀನಾಥ, ಕೇದಾರನಾಥ ಒಂದು ಬಂಚ್, ಚಾಮುಂಡೇಶ್ವರಿ, ಊಟಿ, ಕೊಡೈಕೆನಾಲ್ ಒಂದು ಬಂಚ್ ಹೀಗೆ ಹತ್ತು ಬಂಚ್‌ಗಳಿವೆಯಂತೆ. ಲಕ್ಷಾವಧಿ ರೂಪಾಯಿಯ ಆಫರ್. ಯಾರಿಗುಂಟು ಯಾರಿಗಿಲ್ಲ? ಇದೆಂಥ ಜಾಹೀರಾತು ಪದ್ಧತಿಯಪ್ಪ? ಶಾಲಿನಿಗೆ ಬೆರುಗು ಖುಷಿ, ಅಚ್ಚರಿ ಏನೆಲ್ಲ ತಿಪ್ಪರಲಾಗ ಹಾಕಿಸುತ್ತಿತ್ತು. ಕಪಲ್ಸಿಗೆ ಮಾತ್ರ ಆಗಿರೋದ್ರಿಂದ ಮಕ್ಕಳನ್ನು ಊರಲ್ಲಿ ಬಿಟ್ಟು ಇಬ್ಬರೇ ಹೊರಡೋದು. ಇರಲಿ ಊರಲ್ಲಿ ಹೊಯಿಗೆ ಆಡ್ತಾ. ಮಾಯಿನಹಣ್ಣು ತಿಂತಾ, ಅಳೆದದ್ದು ಸುರಿದದ್ದೇ. ಲೆಕ್ಕವಿಲ್ಲದಷ್ಟು ಸಲ. ಆಗಾಗ, ನಾಳೆ ಪ್ರದೀಪ ಆ ಚೆಂದದ ಹುಡುಗಿಯ ಮುಂದೆ ಬಾಯ್ತೆರೆದು ಕೂತುಬಿಡುವನೇನೋ ಎಂಬ ಸಂಕಟ ಸಣ್ಣಗೆ ಹೊಟ್ಟೆಮುರಿತದ ಹಾಗೆ ಕಾಡುತ್ತಿತ್ತಾದರೂ, ಒಂದು ದೊಡ್ಡದನ್ನು ಪಡೆಯಲು ಸಣ್ಣದನ್ನು ಕಳೆದುಕೊಳ್ಳಬೇಕಂತೆ. ಸಹಿಸಿಕೊಳ್ಳುವುದಪ್ಪ ಸಣ್ಣ ಕಿರಿಕಿರಿಗಳನ್ನು ಎಂದು ಸಮಾಧಾನಿಸಿಕೊಂಡಿದ್ದು ಎಷ್ಟನೆಯ ಬಾರಿಯೋ, ಪ್ರದೀಪ ಹಾಗಿನವನೇ? ಅಥವಾ ತನಗೇ 'ಹಾಳು ಗಂಡಸರ ಜಾತಿ' ಎಂಬ ಸಂಶಯವೇ? ಶಾಲಿನಿಗೂ ಉತ್ತರ ಅಸ್ಪಷ್ಟವೇ.

ಅಂತೂ ಪ್ರದೀಪನ ಬೈಕಿನಲ್ಲೇ ಸತಿಪತಿಯ ಜೋಡಿ ಒಪ್ಪಾಗಿ ಹೊರಟಾಯಿತು. ಸಾಮಾನ್ಯವಾಗಿ ಇದ್ದುಳ್ಳವರ ಮದುವೆಗಳು ನಡೆಯೋ ಹಾಲ್ ಮತ್ತು ಗಾರ್ಡನ್‌ದು. ಇವರು ಹೋಗುವಷ್ಟರಲ್ಲಿ ಜನ ಗಿಜಿಗುಟ್ಟಿದ್ದರು. ಆದರೆ ಎಲ್ಲ ಪಿನ್‌ಡ್ರಾಪ್ ಸೈಲೆನ್ಸ. ಇಡೀ ಹಾಲ್ ಪಾತಾಳದ ನಾಗಲೋಕವೆಂಬಂತೆ ಸಿಂಗಾರಗೊಂಡಿತ್ತು. ಹಾಲ್/ಗಾರ್ಡನ್‌ಗಳಲ್ಲಿ ಸಣ್ಣ ಸಣ್ಣ ದುಂಡು ಟೇಬಲ್ ಕುರ್ಚಿಗಳು ನೂರಾರು. ಇಬ್ಬರು ಎದುರು. ಅವರನ್ನು ಕೌನ್ಸೆಲಿಂಗ್ ಮಾಡುವವರೊಬ್ಬರು. ಹಾಲು ಬಿಳುಪಿನ ಸಾವಿರಾರು ಲೈಟ್‌ಗಳು ಉರಿಯುತ್ತಿದ್ದವು. ಏರ್ ಕಂಡೀಶನ್ನ ಕೂಲ್ ಜೊತೆಗೆ ಆಗಾಗ ಸಿಬಿರು ಸಿಬಿರು ಸುಗಂಧ ದ್ರವ್ಯ ಸಿಂಪಡನೆಯಾಗುತ್ತಿತ್ತು ತಂತಾನೇ. ಬಂದವರನ್ನು ಎದುರುಗೊಳ್ಳುವ ಮಾತಾಡುವ ಸಖಸಖಿಯರು ಏರ್‌ಲೈನ್ಸ್‌ನಲ್ಲಿಯ ಹಾಗೆ ಡ್ರೆಸ್ ಮಾಡಿಕೊಂಡಿದ್ದರು. ಪ್ರತಿಯೊಬ್ಬರಿಗೂ ಅವರ ಟೇಬಲ್ ನಂಬರ್ ಮೆಸೇಜ್ ಆಗಿತ್ತು. ಶಾಲಿನಿಯದು 99. ಆ ಸಂಖ್ಯೆ ಅವಳ ಮನಸ್ಸಿನಲ್ಲಿ ಹುಟ್ಟಿಸಿದ ಮುದ ಅಷ್ಟಿಷ್ಟಲ್ಲ. ಪ್ರದೀಪ ಆ ಸಂಖ್ಯೆಯನ್ನು ಹುಡುಕುವಷ್ಟರಲ್ಲಿ ಶಾಲಿನಿ ಮತ್ತೆ ಮತ್ತೆ ಆ ವೈಭವವನ್ನು ಗರಬಡಿದವಳಂತೆ ನೋಡುತ್ತಿದ್ದಳು. ಕನಿಷ್ಠ ಒಂದು 50 ಲೈಟ್‌ಗಳನ್ನು ಆರಿಸಿಬಿಡುವಾ ಎಂದು ಜೀವ ಚುಟುಗುಟ್ಟುತ್ತಿತ್ತು. ಆದರದು ಸಭ್ಯತೆಯ ಲಕ್ಷಣವಲ್ಲವಲ್ಲ. ಅವರು ಟೇಬಲ್‌ಗೆ ಕುಳಿತುಕೊಳ್ಳುವಷ್ಟರಲ್ಲಿ 'ಹಾಯ್' ಎಂಬ ಮೆಲುದನಿ. ಸಣ್ಣ ಸಂಗೀತ ಕುರ್ಚಿಯಿಂದಲೋ ಟೇಬಲ್ಲಿನಿಂದಲೋ ತಿಳೀತಿಲ್ಲ. ಪ್ರದೀಪ. "ಹಾಳ್‌ಬೀಳ್ಲೆ" ಅಂತ ಗೊಣಗಿಕೊಂಡನಾದರೂ ಸುತ್ತೆಲ್ಲ ಮಿಕಿ ಮಿಕಿ ನೋಡತೊಡಗಿದ. ಟೇಬಲ್‌ಗಳು ಹತ್ತಿರ ಹತ್ತಿರವೇ ಇದ್ದುವಾದರೂ, ಅದು ಹ್ಯಾಗೆ ಅರೆಂಜ್ ಮಾಡಿದ್ದರೆಂದರೆ ಒಬ್ಬರಿಗೊಬ್ಬರು. ಒಂದು ಟೇಬಲ್ಲಿನವರು ಇನ್ನೊಬ್ಬರಿಗೆ ಡಿಸ್ಟರ್ಬ್ ಮಾಡುವಂತೆ ಇರಲಿಲ್ಲ. ಓಪನ್ ಆಗಿದ್ದೂ ಹಿಡನ್ ಆಗಿರೋ ಮ್ಯಾಜಿಕ್‌ನ್ನು ಎಲ್ಲರೂ ಅನುಭವಿಸುತ್ತ ಕಂಗಾಲಾಗಿರಬೇಕು ಅನ್ನಿಸಿತು ಶಾಲಿನಿಗೆ. ಮಂದ ಸಂಗೀತವೇ ಪರದೆಯ ಹಾಗೆ ಒಬ್ಬರಿಂದೊಬ್ಬರನ್ನು ಬೇರ್ಪಡಿಸುವ ಇಂದ್ರಜಾಲಕ್ಕೆ ದಿಗಿಲುಬಿದ್ದು 'ಇಂಟೀರಿಯರ್ ಡೆಕೋರೇಷನ್ ಅಂತೆಲ್ಲ ಕಲಿಸ್ತರಲೆ ಹಾಂಗೆಲ್ಲ ಇರ್ಬೆಕ್ ಇದೂ ಶಾಲಿ' ಪ್ರದೀಪನ ಮಾತು ಗಂಟಲಲ್ಲೇ ಅಡರಿತು. ಅವಳು ಬಂದಳು. 'ಮ್ಯಾಂವ್' ಅನ್ನುತ್ತ. ಸಾರಿ ಐ ಆ್ಯಮ್ ಲೇಟ. ಆಫೀಸರ್ ಜೊತೆ ಡಿಸ್ಕಶನ್ ಇತ್ತು. ಅಂತೇನೋ ಅಂದಳು. ಅವಳೇನು ಹೇಳುತ್ತಿದ್ದಾಳೆ ಎನ್ನುವುದು ಯಾರಿಗೆ ಬೇಕು? ಆ ದನಿ ಸುರುಳಿ ಸುರುಳಿಯಾಗಿ ಗುಂಯ್‌ಗುಡುತ್ತಿತ್ತು. ಅವಳು ಸೀರೆ ಉಟ್ಟಿದ್ದಳು. ಸೀರೆಯನ್ನ ಹೀಗೂ ಉಡುತ್ತಾರೆಯೇ? ಮೈ ಕಾಣಿಸಲೆಂದೇ ಮುತುವರ್ಜಿಯಿಂದ